

ಹಿಮಶಿಖರ, ಕಣಿವೆಗಳ ಅಪೂರ್ವ ದರ್ಶನ ಮಾಡಿಸುವ ಲಾಯ್ಟರ್ ಬ್ರೂನೆನ್



ಕೋಡುಗಲ್ಲಿನ ಕೆಳಗೆ ಕಾಲುಹಾದಿ

ಇನ್ನೊಂದು ರೈಲ್ವೇ ನಿಲ್ದಾಣದಲ್ಲಿ ಕಣಿವೆಯೊಳಕ್ಕೆ ಚಾಚಿದ ಸಾರಿಗೆಯಂಥ ದೊಡ್ಡ ವ್ಯವಸ್ಥೆ ಇದೆ. ಕಾಲ ಕೆಳಗೆ ಪ್ರಪಾತ; ಸರಳುಗಳ ಮೇಲೆ ನಡೆದು ಹೋದರೆ ಕಾಲನ್ನೇ ನಡುಗಿಸುವ ತಂಗಾಳಿ. ದೂರದಲ್ಲಿ ಹಿಮ ಶಿಖರಗಳು. ಫೋಟೊ (ಮುಖ್ಯವಾಗಿ ಸೆಲ್ಫಿ) ತೆಗೆಸಿಕೊಳ್ಳಲು ಮಾಡಿರುವ ವ್ಯವಸ್ಥೆ ಇದು. ಅಲ್ಲಿ ಇಳಿದು ಫೋಟೊ ತೆಗೆದುಕೊಂಡು ಪ್ರಯಾಣ ಮುಂದುವರೆಸಬಹುದು.

ಅಲ್ಲಿಂದ ಕೆಳಗಿಳಿದು ಬರುವಾಗ ಯುಂಗ್ ಫ್ರೌ ಬೆಟ್ಟದ ಮೇಲಿನ ಕಟ್ಟಡದ ಸಮೀಪ ನೋಟ ಸಿಕ್ಕಿತು. ಅದೊಂದು ವೀಕ್ಷಣಾಲಯವಾಗಿದ್ದು, ಅಲ್ಲಿ ದೂರದರ್ಶಕವಿದೆ. ಅಲ್ಲಿಂದ ಪ್ರಕಟವಾದ ಸಂಶೋಧನಾ ಪ್ರಬಂಧಗಳ ನೆನಪಾಯಿತು.

ಪುನಃ ಲಾಯ್ಟರ್ ಬ್ರೂನೆನ್ ತಲುಪಿ ಇನ್ನೊಂದು ದಿಕ್ಕಿನ ಶಿಖರ ಹತ್ತಲು ಸಿದ್ಧರಾದೆವು. ಈ ರೈಲು ವೆಂಗೆನ್ ತಲುಪಿತು. ದಾರಿಯುದ್ದಕ್ಕೂ ದಟ್ಟ ಕಾಡು. ತಿರುವುಗಳಲ್ಲಿ ಸುಂದರ ಜಲಪಾತಗಳು. ಅಲ್ಲಿಂದ ಮುಂದೆ ಇನ್ನೊಂದು ಬಸ್ ಹತ್ತಿ ಗೊಂಡೊಲಾ ನಿಲ್ದಾಣ ತಲುಪಿದೆವು. ಪುಟ್ಟ ಗೊಂಡೊಲಾಗಳು ನಾಲ್ಕು ಜನರಿಗೆ ಮಾತ್ರ. ಸತತವಾಗಿ ಬರುತ್ತಲೇ ಇರುತ್ತವೆ. ಅನೇಕರು ಭಾರೀ ಸಾಮಗ್ರಿಗಳೊಡನೆ ಬಂದಿದ್ದರು. ಬೆಟ್ಟಗಳ ಮೇಲೆ ಹಾದು ಹೋಗುವ ಈ ಪ್ರಯಾಣ ಪುಳಕ ತಂದಿತ್ತು.

ಇಲ್ಲಿ ಎರಡು ನಿಲ್ದಾಣಗಳು – ಮೊದಲನೆಯದು ಪ್ಯಾರಾಗ್ಲೈಡಿಂಗ್ ಮಾಡುವವರ ನಿಲ್ದಾಣ. ಎರಡನೆಯದು ಪಾದಚಾರಿಗಳಿಗೆ. ಅದೇ ಗ್ರಿಂಡೆನ್ ವಾಲ್ಡ್. ಸ್ವಲ್ಪ ಕೆಳಗೆ ಬಣ್ಣ ಬಣ್ಣದ ಪ್ಯಾರಾಗ್ಲೈಡರ್‌ಗಳು ಏರುವ, ಹಾರುತ್ತಾ ಮೇಲೇರುವ ನೋಟ. ಇಳಿದೊಡನೆ ನಮ್ಮನ್ನು ಸ್ವಾಗತಿಸುವುದು ಒಂದು ಕರಡಿಯ ಪ್ರತಿಮೆ. ಅಲ್ಲಿ ಹಸುಗಳ ಮತ್ತು ಮೇಕೆಗಳ ಮಧ್ಯೆ ಓಡಾಡುವುದೇ ಒಂದು ಸೊಗಸು. ಕಣಿವೆಯ ಸೊಬಗು ಸವಿಯಲು ಒಂದು ಕ್ಲಿಫ್ ಇದೆ. ಅಂದರೆ, ಕೋಡುಗಲ್ಲುಗಳನ್ನು ಆತುಕೊಂಡ ಕಬ್ಬಿಣದ ಸರಳುಗಳ ಕಾಲುಹಾದಿ. ಕೆಳಗೆ ಕಣಿವೆ, ಪುಟ್ಟ ನದಿ. ಸುತ್ತಲೂ ಹುಲ್ಲುಗಾವಲು, ಅನತಿ ದೂರದಲ್ಲಿ

ಯುಂಗ್ ಫ್ರೌ (ಇದರ ಅರ್ಥ ಕನ್ಯೆ), ಮೋಂಕ್ ಮತ್ತು ಐಗರ್ ಈ ಮೂರು ಶಿಖರಗಳ ತಪ್ಪಲಿನ ಭವ್ಯ ನೋಟ ಪುಟ್ಟ ಊರು ಕ್ಲೈನ್ ಶೈಡಿಗ್ ಮುನ್ನೆಲೆಯಲ್ಲಿ ಕಾಣುತ್ತದೆ. ಎರಡು ಶಿಖರಗಳ ಮಧ್ಯದ ತಪ್ಪಲಿನಲ್ಲಿ ಸ್ಫಿಂಕ್ಸ್ ವೀಕ್ಷಣಾಲಯವಿದೆ. ಅಲ್ಲಿಗೆ ನಮ್ಮನ್ನು ಕೊಂಡೊಯ್ಯುವ ರೈಲು ಮಾರ್ಗ ಮಧ್ಯದ ಐಗರ್ ಶಿಖರವನ್ನು ಬಳಸಿ ಸುರಂಗದಲ್ಲಿ ಸಾಗುತ್ತದೆ. ಸೂಕ್ಷ್ಮವಾಗಿ ಗಮನಿಸಿದರೆ ಮಾತ್ರ ವೀಕ್ಷಣಾಲಯದ ಗುಮ್ಮಟ ಕಾಣುತ್ತದೆ. ಚಳಿಗಾಲದಲ್ಲಿ ಹಿಮದ ಕಾರಣ ಈ ಇಡೀ ನೋಟ ಒಂದೇ ಬಿಳಿಯ ಹಾಸಿನಂತೆ ಕಾಣುತ್ತದೆ.